


## ಬದುಕು ಕಟ್ಟಿಕೊಳ್ಳಲು ಬೇಕು ದಶಕ

ಮೂರು ವರ್ಷಗಳ ಹಿಂದೆ ಬೆಟ್ಟ ಕುಸಿದ ಸ್ಥಳಗಳೂ ಈಗಲೂ ಹಾಗೆಯೇ ಇವೆ. ಬೆಟ್ಟಕ್ಕೆ ದೊಡ್ಡ ಗಾಯವಾದಂತೆ ಕಾಣಿಸುತ್ತಿದೆ. ಫಲವತ್ತತೆ ಉಳಿದಿಲ್ಲ; ಹಸಿರು ಚಿಗುರಿಲ್ಲ. ಮಳೆಯಿಂದ ಗಾಯಗೊಂದ ಪ್ರದೇಶ ಯುದ್ಧ ಭೂಮಿಯಂತೆ ಗೋಚರಿಸುತ್ತಿವೆ. ಹಸಿರು ಬೆಳೆಸಲು 'ಸೀಡ್ ಬಾಲ್' ಪ್ರಯೋಗದ ಯೋಜನೆ ಜಾರಿಗೆ ಬರಲಿಲ್ಲ. ಅಂದು ಕುಸಿದಿದ್ದ ಸ್ಥಳಗಳು, ಸಣ್ಣ ಮಳೆಗೂ ಈಗ ಜರಿಯುತ್ತಿವೆ. ಬೆಟ್ಟ ಕುಸಿತದ ತಲ್ಲಣ ಒಂದೆಡೆ ಮಾತ್ರ ಇಲ್ಲ. ಜಿಲ್ಲೆಯ ಎಲ್ಲ ಕಡೆಗೂ ವ್ಯಾಪಿಸಿದೆ. ನೂರಾರು ವರ್ಷದಿಂದ ಕಟ್ಟಿಕೊಂಡಿದ್ದ ಕೃಷಿ, ಆಶ್ರಯ ತಾಣಗಳು ಒಮ್ಮೆಲೇ ಪ್ರಪಾತ ಸೇರುತ್ತಿವೆ. ಭವಿಷ್ಯದ ಚಿಂತೆ ಕಾಡುತ್ತಿದೆ. ಮತ್ತೆ ಬದುಕು ಕಟ್ಟಿಕೊಳ್ಳಲು ದಶಕವೇ ಬೇಕು ಎನ್ನುವುದು ತಜ್ಞರ ಅನಿಸಿಕೆ.

ಅರಣ್ಯೀಕರಣದ ಹೆಸರಿನಲ್ಲಿ ನೀಲಗಿರಿ, ಸಾಗುವಾನಿ, ಅಕೇಶಿಯಾ ಮರಗಳು ನೆಡಲಾಗುತ್ತಿದೆ. ಈ ಜಾತಿಯ ಮರಗಳಿಗೆ ಮಳೆಗಾಲದಲ್ಲಿ ನೀರನ್ನು ಹಿಡಿದಿಡುವ, ಮಣ್ಣಿನ ಸವಕಳಿ ತಡೆಯುವ ಸಾಮರ್ಥ್ಯವಿಲ್ಲ. ಈ ಬದಲಾವಣೆಗಳು, ಭವಿಷ್ಯದ ಮೇಲೆ ಆಪತ್ತು ತರುತ್ತಿವೆ.


ಕೊಡವರು, ಅರೆಭಾಷೆ ಗೌಡರು ಜಿಲ್ಲೆಯಲ್ಲಿ ಹೆಚ್ಚಾಗಿ ಕೃಷಿಯನ್ನು ಅವಲಂಬಿಸಿದ್ದರು. ಯುವಕರು ಕೃಷಿಯಿಂದ ವಿಮುಖರಾಗಿ ಭೂಮಿ ಮಾರಾಟ ಮಾಡಿ ನಗರ ಸೇರಿದ್ದರು. ಈಗ ಕೊರೊನಾ ಕಾರಣಕ್ಕೆ ಊರಿಗೆ ಮರಳಿರಬಹುದು. ಆದರೆ, ನಗರದ ಸೆಳೆತ ಅವರನ್ನು ಬಿಟ್ಟಿಲ್ಲ. ಹಿಂದೆ ಮಾರಾಟ ಮಾಡಿದ್ದ ಭೂಮಿಗಳಲ್ಲಿ ರೆಸಾರ್ಟ್, ಹೋಮ್ ಸ್ಟೇ ತಲೆಯೆತ್ತಿವೆ. ಅವರು ಬೆಟ್ಟದ ಮೇಲೆ ಈಜುಕೊಳ, ಪಾರ್ಕ್ ನಿರ್ಮಿಸಿದ್ದಾರೆ ಎಂದು ಕೊಡಗಿನ ಹಿರಿಯ ನಾಗರಿಕರಾದ ಭರತ್ ಹೇಳುತ್ತಾರೆ.

'ಕಾಫಿ ತೋಟ, ರೆಸಾರ್ಟ್ ಕೆಲಸಕ್ಕೆ ಬಂದ ಬಹುತೇಕರು ಇಲ್ಲಿಯೇ ಶಾಶ್ವತವಾಗಿ ನೆಲೆಸುತ್ತಾರೆ. ಇದರಿಂದ ನಗರೀಕರಣ ಹೆಚ್ಚಾಗಿದೆ. ಅದರ ಪರಿಣಾಮ ನಿಧಾನಕ್ಕೆ ಗೋಚರಿಸಲು ಆರಂಭಿಸಿದೆ' ಎಂದು ಭರತ್ ಅವರಿಗೆ ಅನ್ನಿಸಿದೆ.

2018ರ ಪ್ರಾಕೃತಿಕ ವಿಕೋಪದ ಬಳಿಕ ಎಚ್ಚೆತ್ತ ಜಿಲ್ಲಾಡಳಿತವು ಬೆಟ್ಟ ಪ್ರದೇಶದಲ್ಲಿನ ನಿವಾಸಿಗಳನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಿ ಅಲ್ಲಿ ಮನೆ ನಿರ್ಮಿಸಿಕೊಡುವ ಕೆಲಸಕ್ಕೆ ಕೈಹಾಕಿತ್ತು. ಅನುದಾನ ಕೊರತೆಯಿಂದ ಪೂರ್ಣಗೊಂಡಿಲ್ಲ. ಜನರು ಇನ್ನೂ ಅಪಾಯಕಾರಿ ಸ್ಥಳದಲ್ಲಿ ನೆಲೆಸಿದ್ದಾರೆ.

ತಾತ್ಪರ್ಯ ಇಷ್ಟೇ. ಕಳೆದ ಮೂರು ವರ್ಷಗಳಿಂದ ಮಳೆಗಾಲದಲ್ಲಿ ಕೊಡಗಿನಲ್ಲಿ ಸೃಷ್ಟಿಯಾಗುತ್ತಿರುವ ಪ್ರವಾಹ ಪರಿಸ್ಥಿತಿಯನ್ನು 'ಪ್ರಾಕೃತಿಕ ವಿಕೋಪ' ಎಂದು ಹೇಳಿ ಸುಮ್ಮನಾಗುವಂತಿಲ್ಲ. ಅದು ಮನುಷ್ಯನೇ ಸೃಷ್ಟಿಸಿದ ಕಂಟಕ. ಈಗ ಅಗತ್ಯವಾಗಿರುವುದು ಕೊಡಗಿನ ಪರಿಸರವನ್ನು ಸರಿಪಡಿಸುವ ಕೆಲಸ. ಸರಿಪಡಿಸುವುದೆಂದರೆ ಮತ್ತೇನಿಲ್ಲ, ನಮ್ಮಷ್ಟಕ್ಕೆ ನಾವಿರುವುದು. ಕಾಡಿನ ಪಾಡಿಗೆ ಅದನ್ನು ಬಿಟ್ಟು, ಗುಡ್ಡಗಳ ತಂಟೆಗೆ ಹೋಗದೆ ಇದ್ದರಾಯಿತು.

ಅಭಿವೃದ್ಧಿಯ ವಿವೇಕ ಇರುವುದು ಪ್ರಕೃತಿಯನ್ನು ವಿರೂಪಗೊಳಿಸುವುದರಲ್ಲಿ ಅಲ್ಲ; ಪ್ರಕೃತಿಯೊಂದಿಗೆ ಹೊಂದಿಕೊಂಡು ಹೋಗುವುದರಲ್ಲಿ.




ಪ್ರತಿಕ್ರಿಯಿಸಿ: feedback@sudha.co.in